ಯಾಕೋ ಅತ್ತೆ ಈ ರೀತಿ ಸಾಯಬಾರದಿತ್ತು ಎಂದು ಅನ್ನಿಸದೇ ಇರಲಿಲ್ಲ. ತಮ್ಮ ಗಂಡನ ಮನೆಗಳಿಂದ ಓಡೋಡಿ ಬರುತ್ತಿದ್ದ ಒಬ್ಬೊಬ್ಬರೇ ಹೆಣ್ಣುಮಕ್ಕಳು, ಹೆಣದ ಮೇಲೆ ಬಿದ್ದು ಒದ್ದಾಡುತ್ತಿದ್ದರೆ ಸುವರ್ಣೆಯ ಕಣ್ಣಾಲಿಗಳೂ ದ್ರವವಾಗುತ್ತಿದ್ದವು. ವಿಷಯ ತಿಳಿದಿದ್ದ ಅವರಲ್ಲೊಬ್ಬಾಕೆ, 'ಹತ್ತಾರು ವರ್ಷ ಬಾಳಿ ಬದುಕಿದ್ದ ನಮ್ಮವ್ವ ನಿನ್ನಂತ ಮನೆಹಾಳಿಯಿಂದ ವಿಷ ಕುಡಿದು ಸಾಯುವಂತಾಯಿತಲ್ಲೇ' ಎಂದು ಎಲ್ಲರೆದುರು ಮುಖಕ್ಕೇ ತಿವಿಯುವಂತೆ ಲಟಿಕೆ ಮುರಿದರೂ ಆಕೆ ತುಟಿಪಿಟಕ್ ಅನ್ನಲಿಲ್ಲ.

ಕಟಬಾಯಿಯಿಂದ ಒಸರುತ್ತಿದ್ದ ದ್ರವವನ್ನು ದೊಡ್ಡಮಗ ನರಸಯ್ಯ ವರೆಸುತ್ತಿದ್ದ. ಸ್ರವಿಸುತ್ತಿದ್ದ ಆ ದ್ರವಕ್ಕೆ ಕ್ರಮೇಣವಾಸನೆಯೂ ಸೇರಲಾರಂಭಿಸಿತ್ತು. ಅದನ್ನು ಮರೆಮಾಚಲು ಹೆಣದ ಪಕ್ಕ ಊದಿನಕಡ್ಡಿ ಹಚ್ಚಿ ಇಟ್ಟಿದ್ದರು. ಅದೂ ಮೀರಿದಾಗ ಸೆಂಟಿನ ಬಾಟಲಿಯನ್ನು ತರಿಸಿ ಹೆಣದ ಮೇಲೆಲ್ಲ ಸಿಂಪಡಿಸಿದ್ದರು. ಅದರ ಪಕ್ಕದಲ್ಲೇ ಕುಳಿತಿದ್ದದ್ದರಿಂದ ಸ್ರವಿಸುತ್ತಿದ್ದ ವಾಸನೆಯ ಜೊತೆಗೆ ಬೆರೆತಿದ್ದ ವಿಷದ ಕಮಟು ವಾಸನೆಯೂ ಮೂಗಿಗೆ ತಾಕದೇ ಇರಲಿಲ್ಲ. ಅತ್ತೆ–ಸೊಸೆಯರ ಜಗಳ ತಾರಕಕ್ಕೇರಿದಾಗ ರೋಸಿಹೋಗಿ, ತಾನೇ ಅಲ್ಲವೇ ಐವತ್ತು ರುಪಾಯಿ ಕೊಟ್ಟು, 'ಎಲ್ಲಾದರೂ ಹೋಗಿ ವಿಷ ಕುಡಿದು ಸಾಯಿ' ಎಂದು ದುಡುಕಿ ಹೇಳಿದ್ದು ಎಂಬುದು ಬೇಡವೆಂದರೂ ನೆನಪಿಗೆ ಬಂದು ಮತ್ತೆ ಮತ್ತೆ ದುಃಖ ಒತ್ತರಿಸಿ ಬರುತ್ತಿತ್ತು. ಅವ್ವ ಇಂಥ ಹಟಮಾರಿ ಎಂದು ತಿಳಿದಿದ್ದರೆ ನಿಜವಾಗಿಯೂ ತಾನು ಹಾಗೆ ಹೇಳುತ್ತಿರಲಿಲ್ಲ ಎಂದು ಒಳಗೊಳಗೇ

